# ಜ್ಯೋತಿ ಬೆಳಗುತಿದೆ, ಪರಂಜ್ಯೋತಿ ಬೆಳಗುತಿದೆ - ೨

## (ಬೃಹದಾರಣ್ಯಕೋಪನಿಷತ್ತು - ೫)

ಸ್ವಾಮಿ ವೀರೇಶಾನಂದ

**ಯಾ**ಜ್ಞವಲ್ಕ್ಯನು ಜನಕನ ಜೊತೆಗೆ ಸಂಭಾಷಣೆಯನ್ನು ನಡೆಸುತ್ತಿದ್ದಾನೆ. ಆತ್ಮವು ಸ್ವಪ್ನದಿಂದ ಸುಷುಪ್ತಿಯ ಸ್ಥಿತಿಗೆ ಹೋಗುವುದು. ಅನಂತರ ಅದೇ ಮಾರ್ಗವಾಗಿ ಸ್ವಪ್ನಸ್ಥಿತಿಗೇ ಹಿಂತಿರುಗಿ ಬರುವುದು. ಮತ್ತೆ ಹೋದ ದಾರಿಯಲ್ಲಿಯೇ ಜಾಗ್ರದವಸ್ಥೆಗೆ ಬರುವುದು. ಈ ಮೂರು ಸ್ಥಿತಿಗಳಲ್ಲಿಯೂ ಏನನ್ನು ಕಾಣುತ್ತಾನೋ, ಅವುಗಳ ಸಂಗವು ಅವನಿಗೆ ಇರುವುದಿಲ್ಲ. ಪಾಪವಾಗಲಿ, ಪುಣ್ಯವಾಗಲಿ ಅಂಟಿಕೊಳ್ಳುವುದಿಲ್ಲ. ಎಲ್ಲದರಿಂದಲೂ ಅವನು ಮುಕ್ತನಾಗಿರುತ್ತಾನೆ. ಈ ಪುರುಷನು ಅಸಂಗನು.

ಜಾಗ್ರದವಸ್ಥೆಯಿಂದ ಅವನು ಮತ್ತೆ ಸ್ವಪ್ನಕ್ಕೇ ಜಾರುತ್ತಾನೆ. ಅಲ್ಲಿ ಅವನು ಲಿಂಗಶರೀರದ ಅನುಭವವನ್ನು ಪಡೆಯುತ್ತಾನೆ ಎಂದು ಉಪನಿಷತ್ತು ಹೇಳುತ್ತದೆ. ಈ ಸ್ವಪ್ನದ ಅನುಭವವು ಜಾಗ್ರದವಸ್ಥೆಯ ಅನುಭವಕ್ಕೆ ಹೊಂದಿಕೊಂಡಂತೆ ಇರುತ್ತದೆ. ಅವಿದ್ಯೆಯು ಹೆಚ್ಚಿರುವಲ್ಲಿ ಅವನು ಸ್ವಪ್ನದಲ್ಲಿ ಭಯದ ದೃಶ್ಯಗಳನ್ನು ಕಾಣುತ್ತಾನೆ. ಯಾರೋ ಕೊಲ್ಲಲು ಬರುತ್ತಿರುವಂತೆ, ಯುದ್ಧದಲ್ಲಿ ಗೆಲ್ಲುವಂತೆ, ಆನೆಯು ಅಟ್ಟಿಸಿಕೊಂಡು ಬರುವಂತೆ, ಗುಂಡಿಗೆ ಬೀಳುವಂತೆ ಅವನಿಗೆ ದೃಶ್ಯಗಳು ಕಾಣಿಸುತ್ತವೆ. ಇಂಥ ಭಯವನ್ನು ಅವನು ಎಚ್ಚರದಲ್ಲಿಯೂ ಅನುಭವಿಸುತ್ತಿರುತ್ತಾನೆ. ಇದೇ ಭಯವು ಸ್ವಪ್ನದಲ್ಲಿಯೂ ಅವನಿಗೆ ಈ ದೃಶ್ಯಗಳನ್ನು ಕಾಣುವಂತೆ ಮಾಡುತ್ತದೆ. ಅವಿದ್ಯೆಯು ಕಡಿಮೆಯಾದಾಗ, ವಿದ್ಯೆಯು ಅಧಿಕವಾಗಿದ್ದಾಗ, ಅವನು ದೇವತೆಯಂತೆ, ರಾಜನಂತೆ ಅನುಭವವನ್ನು ಪಡೆದುಕೊಳ್ಳುತ್ತಾನೆ. ಅವಿದ್ಯೆಯ ಲೇಶವೂ ಇಲ್ಲದೆ, ವಿದ್ಯೆಯು ಸರ್ವೋನ್ನತ ಮಟ್ಟವನ್ನು ಪಡೆದುಕೊಂಡಾಗ, **ಸರ್ವೋಽಸ್ಮೀತಿ ಮನ್ಯತೇ, ಸೋಽಸ್ಯ ಪರಮೋ ಲೋಕಃ** – ಎಲ್ಲವೂ ತಾನೇ ಆಗಿರುವಂತೆ ಭಾವಿಸಿಕೊಳ್ಳುತ್ತಾನೆ. ಇದೇ ಪಡೆಯಬಹುದಾದ ಅತ್ಯಂತ ಉನ್ನತ ಸ್ಥಿತಿಯಾಗಿದೆ; ಪರಮೋಚ್ಚ ಗತಿಯಾಗಿದೆ.

ಉಪನಿಷತ್ತು ಈ ಸ್ಥಿತಿಯನ್ನು ಸುಂದರವಾಗಿ ಬಣ್ಣಿಸುತ್ತದೆ: ಈ ಸ್ಥಿತಿಯು ಎಲ್ಲ ಕಾಮನೆಗಳನ್ನೂ ಮೀರಿರುವ ಸ್ಥಿತಿ. ಅಲ್ಲಿ ಕಾಮದ ವಾಸನೆಯು ಕಂಡುಬರುವುದಿಲ್ಲ. ಹಾಗೆಯೇ ಇದು ಧರ್ಮ-ಅಧರ್ಮಗಳನ್ನು ಮೀರಿದ ನೆಲೆ. ಆತ್ಮವು ಅಭಯ ರೂಪವಾದುದು. ಆದ್ದರಿಂದ ಎಲ್ಲವನ್ನೂ ಆತ್ಮವೆಂದೇ ಕಾಣುವ ಈ ಸ್ಥಿತಿಯು ಅಭಯದ ಸ್ಥಿತಿ. ಇಲ್ಲಿ ಹೊರಗಿನದೇನನ್ನೂ ಒಬ್ಬನು ಅರಿಯುವುದಿಲ್ಲ; ಒಳಗಿನದನ್ನೂ ಅರಿಯುವುದಿಲ್ಲ, ತನ್ನ ಆತ್ಮನೊಂದಿಗೆ ಪರಿಪೂರ್ಣ ತಾದಾತ್ಮ್ಯದ ಅನುಭವವನ್ನು ಅವನು ಪಡೆದುಕೊಳ್ಳುತ್ತಾನೆ.

ಇಲ್ಲಿ ಒಬ್ಬ ಮನುಷ್ಯನು ಆಪ್ತಕಾಮನಾಗುತ್ತಾನೆ; ಆತ್ಮಕಾಮನಾಗುತ್ತಾನೆ; ಅಕಾಮನಾಗುತ್ತಾನೆ. ಆಪ್ತಕಾಮನೆಂದರೆ ಎಲ್ಲ ಕಾಮಗಳನ್ನೂ ಪಡೆದುಕೊಂಡವನು. ಅದು ಹೇಗೆ ಸಾಧ್ಯ? ಆತ್ಮಕಾಮನಾಗಿರುವುದರಿಂದ. ಆತ್ಮವೇ ಎಲ್ಲ ಕಾಮನೆಗಳ ಸೆಲೆಯಾಗಿದೆ. ಯಾರು ಆತ್ಮನಲ್ಲಿಯೇ ತನ್ನ ಎಲ್ಲ ಕಾಮಗಳ ಪ್ರಾಪ್ತಿಯನ್ನು ಕಂಡುಕೊಳ್ಳುತ್ತಾನೆಯೋ, ಅವನು ಆತ್ಮಕಾಮನು. ಆತ್ಮಕಾಮನಾಗಲು ಹೇಗೆ ಸಾಧ್ಯ? ಕಾಮವಿಲ್ಲದ ಸ್ಥಿತಿ ಅವನಿಗೆ ಇದ್ದಾಗ ಮಾತ್ರ. ಹೊರಗಿನ ವಸ್ತುಗಳ ಮೇಲೆ ಕಾಮನೆ ಇದ್ದರೆ ಆತ್ಮಕಾಮನಾಗಲು ಸಾಧ್ಯವಿಲ್ಲ. ಹೀಗೆ ಒಬ್ಬನು ಅಕಾಮನಾದ್ದರಿಂದ, ಆತ್ಮಕಾಮನಾಗುತ್ತಾನೆ; ಆತ್ಮಕಾಮತ್ವದಿಂದ ಅವನಿಗೆ ಆಪ್ತಕಾಮತ್ವ ಬರುತ್ತದೆ.

ಇಲ್ಲಿ ಯಾವ ಬಗೆಯ ಶೋಕವೂ ಇಲ್ಲ , **ಶೋಕಾಂತರಮ್** ಎಂದು ಉಪನಿಷತ್ತು ಬಣ್ಣಿಸುತ್ತದೆ. ಶೋಕಕ್ಕೆ ಕಾರಣ ಕಾಮವೇ. ಹೀಗಾಗಿ ಇವು ಒಂದೇ ಆಗಿವೆ. ಕಾಮವಿಲ್ಲದೆಡೆ ಶೋಕವೂ ಇಲ್ಲ.

ಇಲ್ಲಿ ತಂದೆಯು ತಂದೆಯಾಗಿ ಉಳಿಯುವುದಿಲ್ಲ. ಏಕೆಂದರೆ ಎಲ್ಲವೂ ಆತ್ಮವೇ ಎನ್ನುವ ಪರಿಜ್ಞಾನ ಅವನಿಗೆ ಬಂದಿರುತ್ತದೆ. ತಾಯಿಯು ತಾಯಿಯಾಗಿರುವುದಿಲ್ಲ. ಹಾಗೆಯೇ ಲೋಕಗಳು, ದೇವತೆಗಳು, ವೇದಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಆತ್ಮರೂಪವೇ ಆಗಿಬಿಡುವವು. ಕಳ್ಳನು ಕಳ್ಳನಾಗಿರನು; ಭ್ರೂಣಹತ್ಯೆಯನ್ನು ಮಾಡಿದ ಮಹಾಪಾತಕನು ಕೂಡ ತನ್ನ ಪಾಪವನ್ನು ಅಲ್ಲಿ ಕಳೆದುಕೊಳ್ಳುವನು. ಎಲ್ಲವೂ ಆತ್ಮವೇ ಆಗಿರುವಾಗ, ಪಾಪಪುಣ್ಯಗಳಿಗೆ ಎಡೆಯಾದರೂ ಎಲ್ಲಿದೆ? ತಪಸ್ಸು ಮಾಡುವ ಮುನಿಯು ತನ್ನ ಪುಣ್ಯವನ್ನೇನೂ ಈ ಸ್ಥಿತಿಗೆ ತೆಗೆದುಕೊಂಡು ಬರುವುದಿಲ್ಲ.

ಒಟ್ಟಾರೆ ಒಬ್ಬ ಮನುಷ್ಯನು ಲೌಕಿಕ ಪ್ರಪಂಚದ ಪುಣ್ಯಪಾಪಗಳೆಲ್ಲವನ್ನೂ ಅಲ್ಲಿ ತ್ಯಜಿಸಿಬಿಡುತ್ತಾನೆ. ಯಾವುದರಿಂದಲೂ ಅವನು ಅಂಟಿಕೊಳ್ಳುವುದಿಲ್ಲ. ಆಗ ಅವನು ತನ್ನ ಮನಸ್ಸಿನ ಶೋಕಗಳನ್ನೆಲ್ಲ ದಾಟಿಹೋಗುತ್ತಾನೆ. ಈ ಸಂದರ್ಭದಲ್ಲಿ ಶೋಕ ಎನ್ನುವುದಕ್ಕೆ ಶ್ರೀಶಂಕರಾಚಾರ್ಯರು ವಿಶೇಷ ಅರ್ಥವನ್ನು ನೀಡುತ್ತಾರೆ. ಅವರ ಪ್ರಕಾರ ಶೋಕ ಎಂದರೆ ಕಾಮ ಎಂದರ್ಥ. ಯಾವುದೋ ಒಂದು ಇಷ್ಟವಾದ ವಿಷಯಕ್ಕಾಗಿ ಹಾತೊರೆಯುತ್ತೇವೆ. ಅದೇ ಕಾಮ. ಅದನ್ನು ಪಡೆದುಕೊಂಡು ನಲಿದಾಡುತ್ತೇವೆ. ಕಾಲಕ್ರಮೇಣ ಅದು ನಮ್ಮನ್ನು ಬಿಟ್ಟು ಹೋಗುತ್ತದೆ. ಪ್ರಿಯರಾದ ಬಂಧುಮಿತ್ರರೂ ನಮ್ಮನ್ನು ಬಿಟ್ಟು ಹೋಗುತ್ತಾರೆ. ಆ ವಿಯೋಗ ನಮಗೆ ಸಹಿಸಲಾಗದ ಶೋಕವನ್ನು ಉಂಟುಮಾಡುತ್ತದೆ. ಆದ್ದರಿಂದ ಶಂಕರಾಚಾರ್ಯರು ಶೋಕ, ಕಾಮ — ಇವುಗಳು

ಪರ್ಯಾಯ ಶಬ್ದಗಳು ಎಂದು ಹೇಳುತ್ತಾರೆ. ಯಾವಾಗ ಈ ಕಾಮವನ್ನು ಮೀರಿಹೋಗುತ್ತೇವೆಯೋ, ಆಗ ಶೋಕವನ್ನು ಕೂಡ ಮೀರಿಹೋಗುತ್ತೇವೆ. ಶೋಕಾತೀತರಾಗುತ್ತೇವೆ!

ಇಂಥ ಕಾಮವು ಎಲ್ಲಿ ಹುಟ್ಟುತ್ತದೆ? ಯಾರನ್ನು ತಟ್ಟುತ್ತದೆ? – ಅದು ಆತ್ಮನಿಗೆ ಸೇರಿದ್ದಲ್ಲ ಎಂದು ಉಪನಿಷತ್ತು ಸ್ಪಷ್ಟವಾಗಿ ಹೇಳುತ್ತದೆ. **ಸರ್ವಾನ್ ಶೋಕಾನ್ ಹೃದಯಸ್ಯ ಭವತಿ** ಎಲ್ಲ ಬಗೆಯ ಶೋಕಗಳೂ ಹೃದಯಕ್ಕೇ ಉಂಟಾಗುತ್ತವೆ ಎಂದು ಇದರ ಅರ್ಥ. ಹೃದಯವೆಂದರೇನು? ನಮ್ಮ ಅಂತಃಕರಣ. ನಮ್ಮ ಮನಸ್ಸು , ಬುದ್ಧಿಗಳಲ್ಲಿಯೇ ಶೋಕದ ಅನುಭವ ಆಗುವುದು. ಕಾಮವಾಗಲಿ, ಸಂಕಲ್ಪವಾಗಲಿ, ಸಂಶಯಗಳಾಗಲಿ ಉಂಟಾಗುವುದು ಮನಸ್ಸಿನಲ್ಲಿ ತಾನೇ. ಆತ್ಮಸ್ಥಿತಿಯು ಮನಸ್ಸಿನ ಸ್ಥಿತಿಯನ್ನು ಮೀರಿನಿಂತ ಉಚ್ಚ ಸ್ಥಿತಿ. ಹೀಗಾಗಿ ಅಲ್ಲಿ ಶೋಕದ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಸುಷುಪ್ತಿಯ ಸ್ಥಿತಿಯಲ್ಲಿ ಒಬ್ಬನು ಯಾರನ್ನೂ ನೋಡಲಾಗುವುದಿಲ್ಲ , ಹಾಗೆಂದೇ ನೋಡುವ ಸಾಮರ್ಥ್ಯ ಇಲ್ಲವೆಂದಲ್ಲ. ಆತ್ಮಚೈತನ್ಯ ಇದ್ದೇ ಇರುತ್ತದೆ. ಅಂದರೆ 'ದ್ರಷ್ಟಾ' ಅಥವಾ 'ನೋಡುವವನು' ಇದ್ದೇ ಇರುತ್ತಾನೆ. ಆದರೆ ನೋಡುವುದಕ್ಕೆ ಏನೂ ಇರುವುದಿಲ್ಲ. ಉಪನಿಷತ್ತು ಮಾರ್ಮಿಕವಾಗಿ ಹೇಳುತ್ತದೆ: 'ಈ ಸ್ಥಿತಿಯಲ್ಲಿ ಕಾಣುವುದು ಎನ್ನುವುದು ಇಲ್ಲದೇ ಇಲ್ಲ, ಕಾಣುವವನು ಇದ್ದೇ ಇರುತ್ತಾನೆ. ಆದರೆ ಅಲ್ಲಿ ಏನೂ ಕಾಣುವುದಿಲ್ಲ.' ಇದಕ್ಕೆ ಕಾರಣವನ್ನು ಕೂಡ ಮುಂದೆ ಉಪನಿಷತ್ತೇ ವಿವರಿಸುತ್ತದೆ: **ದೃಷ್ಟೇಃ ವಿಪರಿಲೋಪಃ ವಿದ್ಯತೇ ಅವಿನಾಶಿತ್ವಾತ್ –** ದೃಷ್ಟಿಗೆ ಲೋಪವೆನ್ನುವುದು ಇಲ್ಲ, ಏಕೆಂದರೆ ಅದು ಅವಿನಾಶಿ. ಇಲ್ಲಿ 'ದ್ರಷ್ಟಾ' ಎನ್ನುವವನು ಯಾರು? 'ದೃಷ್ಟಿ' ಎನ್ನುವುದು ಏನು? ಆತ್ಮಚೈತನ್ಯವೇ ಇಲ್ಲಿ ದ್ರಷ್ಟಾ ಅಂದರೆ ನೊಡುವವನು. ದೃಷ್ಟಿಯೆಂದರೆ ಆತ್ಮಚೈತನ್ಯದ ಸ್ವಭಾವವಾದ ಜ್ಞಾನ ಅಥವಾ ಅರಿವು. ಬೆಂಕಿ ಎನ್ನುತ್ತೇವೆ. ಸುಡುವ ಶಕ್ತಿಯನ್ನು ಬಿಟ್ಟು ಬೆಂಕಿಯನ್ನು ಕಲ್ಪಿಸಿಕೊಳ್ಳಲು ಸಾಧ್ಯವೆ? ಹಾಗೆಯೇ ಆತ್ಮಚೈತನ್ಯವೇ ಅರಿವು, ಜ್ಞಾನ ಮುಂತಾದ ಶಬ್ದಗಳಿಂದ ಹೆಸರಿಸಲ್ಪಡುತ್ತದೆ. ಇದಕ್ಕೆ ಲೋಪ ಬರುವುದೇ ಇಲ್ಲ. ಬೆಂಕಿಯಿರುವವರೆಗೆ ಉರಿಯುತ್ತಲೇ ಇರುತ್ತದೆ, ಅಲ್ಲವೆ? ಹಾಗೆಯೇ ಆತ್ಮವಿರುವ ತನಕ ಅದರ ಸ್ವಭಾವವಾದ ಚೈತನ್ಯ, ಅರಿವು, ಜ್ಞಾನ — ಇದ್ದೇ ಇರುತ್ತದೆ. ಆತ್ಮವು ಅವಿನಾಶಿ. ಅದಕ್ಕೆ ನಾಶವೇ ಇಲ್ಲ, ಹಾಗೆಂದೇ ಅದರ ಅರಿವಿಗೂ, ಚೈತನ್ಯಕ್ಕೂ ನಾಶವಿಲ್ಲವೇ ಇಲ್ಲ. ಯಾವತ್ತೂ ಅದು ಚಿರಸ್ಥಾಯಿಯಾಗಿ ಇದ್ದೇ ಇರುತ್ತದೆ.

ಈ ಆತ್ಮಚೈತನ್ಯವನ್ನು ಬಿಟ್ಟು, ಎರಡನೆಯದು ಇಲ್ಲವೇ ಇಲ್ಲ ಎನ್ನುತ್ತದೆ ಉಪನಿಷತ್ತು. ಉಪನಿಷತ್ತು ಹೀಗೆ ಘೋಷಿಸುತ್ತದೆ: **ನ ತು ತದ್ ದ್ವಿತೀಯಮಸ್ತಿ ತತೋ ಅನ್ಯದ್ ವಿಭಕ್ತಂ ಯತ್ ಪಶ್ಯೇತ್:** ಎರಡನೆಯದಿದ್ದರೆ ತಾನೇ ನೋಡುವುದು. ಹೀಗಾಗಿ ತಾನು ಒಂದು ವಿಷಯವನ್ನಾಗಿ ನೋಡಬಹುದಾದ ಎರಡನೆಯ ವಸ್ತುವೇ ಇಲ್ಲ. ಇದೇ ರೀತಿ ಎಲ್ಲ ರೀತಿಯ ಇಂದ್ರಿಯ ವ್ಯಾಪಾರಗಳು, ಮನಸ್ಸಿನ ಆಲೋಚನೆಗಳು ಕೂಡ ಇರದಿದ್ದರೂ, ಅದಕ್ಕೆ ಚೈತನ್ಯವನ್ನು ನೀಡುವ ಆತ್ಮಜ್ಯೋತಿ ಮಾತ್ರ ಅಲ್ಲಿ ಬೆಳಗುತ್ತಲೇ ಇರುತ್ತದೆ.

ಇನ್ನೂ ಮುಂದುವರಿದು ಯಾಜ್ಞವಲ್ಕ್ಯನು ಹೇಳುತ್ತಾನೆ: ''ಅಯ್ಯಾ, ಜನಕ ಮಹಾರಾಜ! ಜಾಗ್ರದವಸ್ಥೆಯಲ್ಲಿ ನಮಗಿಂತ ಎರಡನೆಯ ವಸ್ತು ಇದ್ದಂತೆ ತೋರುತ್ತದೆ. ಹೀಗಾಗಿ ಮೂಸುವುದೋ, ನೋಡುವುದೋ, ಕೇಳುವುದೋ, ಚಿಂತಿಸುವುದೋ, ಅರಿಯುವುದೋ ಸಾಧ್ಯವಾಗುತ್ತದೆ. ಆದರೆ ಈ ಅವಸ್ಥೆಯಲ್ಲಿ ಎರಡನೆಯ ವಸ್ತುವೇ ಇರುವುದಿಲ್ಲ. ಹೀಗಾಗಿ ಇವೆಲ್ಲ ಕ್ರಿಯೆಗಳು ಸಾಧ್ಯವಾಗುವುದಿಲ್ಲ. ''

ಇದು ಅದ್ವೈತದ ಸ್ಥಿತಿ. ಹೀಗಾಗಿ ಪರಮಾನಂದದ ಸ್ಥಿತಿ. ಇಲ್ಲಿ ಅನುಭವಕ್ಕೆ ಬರುವ ಪುರುಷನು ಪರಿಶುದ್ಧನು, ಏಕಮೇವ ಅದ್ವಿತೀಯನು. ಇದೇ ಪರಮಗತಿಯು ಕೂಡ. ಈ ಆನಂದದ ಅಂಶವನ್ನು ಆಧರಿಸಿಕೊಂಡೇ ಎಲ್ಲ ಜೀವಿಗಳು ಕೂಡ ಜೀವಿಸಿಕೊಂಡಿವೆ. ಇದು ಹೇಗೆ ಗೊತ್ತೆ? ಮನುಷ್ಯರಲ್ಲಿ ಒಬ್ಬ ನವಯುವಕನಿದ್ದಾನೆ ಎಂದುಕೋ. ಅವನಿಗೆ ಯಾವ ಅಂಗವೈಕಲ್ಯವೂ ಇಲ್ಲ. ಅವನು ಎಲ್ಲ ಸಂಪತ್ತುಗಳನ್ನೂ ಹೊಂದಿರುವವನು. ಅವನು ಎಲ್ಲರ ಒಡೆಯ. ಇಂಥವನು ಪಡುವ ಆನಂದವು ಮನುಷ್ಯರ ಆನಂದದಲ್ಲಿಯೇ ಉನ್ನತ ಮಟ್ಟದ ಆನಂದ ಎಂದು ಹೇಳಬಹುದು. ಅದಕ್ಕೆ ನೂರುಪಟ್ಟು ಆನಂದವನ್ನು ಪಿತೃಲೋಕದಲ್ಲಿ ಇರುವವರು ಅನುಭವಿಸುತ್ತಾರೆ. ಇದಕ್ಕೆ ನೂರುಪಟ್ಟು ಗಂಧರ್ವಲೋಕದ ನಿವಾಸಿಗಳು ಆನಂದಿಸುತ್ತಾರೆ. ಇದಕ್ಕೆ ನೂರುಪಟ್ಟು ಸಂತೋಷವು ದೇವಲೋಕದ ದೇವತೆಗಳಿಗೆ ಲಭಿಸುತ್ತದೆ. ದೇವತೆಗಳು ಅನುಭವಿಸುವ ಆನಂದಕ್ಕಿಂತಲೂ ನೂರುಪಟ್ಟು ಪ್ರಜಾಪತಿಗೆ ಉಂಟಾಗುತ್ತದೆ. ಇದರ ನೂರುಪಟ್ಟು ಆನಂದವನ್ನು ಹಿರಣ್ಯಗರ್ಭನು ಪಡೆದುಕೊಳ್ಳುತ್ತಾನೆ. ಹಿರಣ್ಯಗರ್ಭನ ಸುಖವೇ ಈ ದೃಶ್ಯ ಪ್ರಪಂಚದಲ್ಲಿ ದೊರಕುವ ಎಲ್ಲ ಸುಖಗಳಿಗಿಂತಲೂ ಉನ್ನತವಾದುದು.

ಈ ಸುಖವನ್ನು ಪಡೆದುಕೊಳ್ಳುವುದಕ್ಕೆ ನಾವೇನೂ ಆ ಲೋಕಗಳನ್ನು ಪಡೆಯಬೇಕಾಗಿಲ್ಲ. ಯಾರು ಶಾಸ್ತ್ರವೇತ್ತನೋ, ಪಾಪರಹಿತನೋ, ಕಾಮಗಳ ಹೊಡೆತದಿಂದ ತಪ್ಪಿಸಿಕೊಂಡವನೋ ಅವನು ಇಂಥ ಸುಖವನ್ನು ಈ ಪ್ರಪಂಚದಲ್ಲಿ ಇದ್ದುಕೊಂಡೇ ಪಡೆದುಕೊಳ್ಳುತ್ತಾನೆ. ಅವನು ಎಷ್ಟು ಹೆಚ್ಚು ಕಾಮನಾರಹಿತನಾಗು ತ್ತಾನೆಯೋ, ಅಷ್ಟು ಮೇಲುಮೇಲಿನ ಲೋಕಗಳ ಆನಂದವನ್ನು ಇದ್ದಲ್ಲಿಯೇ ಪಡೆದುಕೊಳ್ಳುತ್ತಾನೆ. ಕಟ್ಟಕಡೆಗೆ ಎಲ್ಲಾ ಲೋಕಗಳ ಆಸೆಯನ್ನೂ ತ್ಯಜಿಸಿ, ಆತ್ಮಭಾವವನ್ನು ತಳೆದು ಅನಂತ ಆನಂದ ವನ್ನು ಪಡೆಯುತ್ತಾನೆ. ಈ ಎಣೆಯಿಲ್ಲದ ಆನಂದಕ್ಕೆ ಮಿತಿಯೇ ಇರುವುದಿಲ್ಲ. ಅದನ್ನು ಯಾವ ಮಾಪನದಿಂದಲೂ ಅಳೆಯ ಲಾಗುವುದಿಲ್ಲ. ಹೀಗಾಗಿ ಎಲ್ಲ ಐಹಿಕ ಸುಖಗಳಿಂದ ವಿರಕ್ತನಾದ ವನಿಗೆ ಮಾತ್ರವೇ ಬ್ರಹ್ಮಾನಂದದ ಪ್ರಾಪ್ತಿ.

ಇಷ್ಟು ಉಪದೇಶವನ್ನು ಕೇಳಿದ ಮೇಲೆಯೂ ಜನಕ ರಾಜನಿಗೆ ತೃಪ್ತಿಯುಂಟಾಗಲಿಲ್ಲ. ''ನಿನ್ನ ಉಪದೇಶಕ್ಕಾಗಿ ಸಹಸ್ರ

ಗೋವುಗಳನ್ನು ಕೊಡುತ್ತೇನೆ; ದಯವಿಟ್ಟು ಮುಂದೆ ಹೇಳುತ್ತ ಹೋಗು. ನನ್ನನ್ನು ಮೋಕ್ಷದವರೆಗೆ ಕರೆದುಕೊಂಡು ಹೋಗು'' ಎಂದು ಪ್ರಾರ್ಥಿಸುತ್ತಾನೆ.

ಯಾಜ್ಞವಲ್ಕ್ಯನು ಇದಕ್ಕೆ ಒಪ್ಪಿಕೊಂಡು ಮುಂದುವರಿಸುತ್ತಾನೆ: ''ಅಯ್ಯಾ ಜನಕ, ಮೊದಲು ನಾನು ಸಂಸಾರದ ಗತಿಯನ್ನು ಹೇಳುತ್ತೇನೆ. ತದನಂತರ ಮೋಕ್ಷದ ಗತಿಯನ್ನು ಹೇಳುತ್ತೇನೆ. ಒಂದು ಬಂಡಿಯ ತುಂಬ ವಿವಿಧ ಪಾತ್ರೆಪಡಗಗಳನ್ನು ಪೇರಿಸಿಟ್ಟಿದ್ದಾರೆ ಎಂದುಕೋ. ಭಾರದಿಂದ ಅದು ಗಡ, ಗಡ ಎಂದು ಶಬ್ದಮಾಡುತ್ತ ದಾರಿಯಲ್ಲಿ ಹೋಗುತ್ತಿರುತ್ತದೆ. ಇದೇ ರೀತಿ ಶರೀರಧಾರಿಯಾದ ಆತ್ಮನೂ ಕೂಡ ಮೇಲುಸಿರು ಬಿಟ್ಟುಕೊಂಡು, ಪ್ರಾಣ, ಲಿಂಗಶರೀರ (ಮನಸ್ಸು, ಬುದ್ಧಿಗಳ ಸಂಸ್ಕಾರ) – ಇವುಗಳೆಲ್ಲವನ್ನೂ ಹೊತ್ತುಕೊಂಡು, ಗಂಟಲಿನಲ್ಲಿ ಗಡ, ಗಡ ಎಂದು ಶಬ್ದ ಮಾಡಿಕೊಂಡು ಹೋಗುತ್ತಾನೆ. ಇಲ್ಲಿ ಒಂದು ತಾತ್ತ್ವಿಕ ವಿಚಾರವಿದೆ. ಆತ್ಮವು ಮನಸ್ಸು, ಬುದ್ಧಿಗಳ ಉಪಾಧಿಗಳಿಂದಲೇ ಜೀವಿಯಂತೆ ಕಾಣಬರುತ್ತದೆ. ಮಡಕೆಯಲ್ಲಿನ ಆಕಾಶವನ್ನು ಘಟಾಕಾಶ ಎಂದು ಕರೆದ ಹಾಗೆ ಇದು. ಈ ಘಟಾಕಾಶವನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಕೊಂಡೊಯ್ಯಬಹುದು. ಆದರೆ ನಿಜವಾದ ಆಕಾಶವನ್ನು ಕೊಂಡೊಯ್ಯಲು ಆಗುವುದಿಲ್ಲ, ಅಲ್ಲವೇ. ಅದೇ ರೀತಿ ಇಲ್ಲೂ ಕೂಡ. ಉಪಾಧಿಗಳ ಸಂಪರ್ಕದಿಂದ ಜೀವರೂಪವನ್ನು ಪಡೆದಿರುವ ಆತ್ಮವೇ ತನ್ನ ಲಿಂಗಶರೀರವನ್ನು ಹೊತ್ತುಕೊಂಡು, ಸಾಯುವ ಸಮಯದಲ್ಲಿ, ಈ ದೇಹದಿಂದ ನಿರ್ಗಮಿಸುತ್ತದೆ.

ಈ ಜೀವಿಯು ದೇಹದಿಂದ ಬೇರ್ಪಡಿಸುವುದು ಹೇಗೆ? ಇದನ್ನು ಯಾಜ್ಞವಲ್ಕ್ಯನು ಸ್ವಾರಸ್ಯವಾಗಿ ಹೇಳುತ್ತಾನೆ: ''ಮನುಷ್ಯನು ದುರ್ಬಲನಾದಾಗ, ಮುಪ್ಪಿನಿಂದ ನರಳುತ್ತಿರುವಾಗ, ಅಥವಾ ವಿಪರೀತ ವ್ಯಾಧಿಗ್ರಸ್ತನಾಗಿರುವಾಗ ತನ್ನ ಅಂಗಗಳಿಂದ ಬಿಡಿಸಿಕೊಳ್ಳುತ್ತಾನೆ. ತಾನು ಆ ದೇಹಕ್ಕೆ ಯಾವ ಮಾರ್ಗವಾಗಿ ಬಂದನೋ, ಅದೇ ಮಾರ್ಗದಿಂದ ತೆರಳುತ್ತಾನೆ. ಇದು ಹೇಗೆ ಗೊತ್ತೆ? ಮಾವಿನ ಹಣ್ಣಾಗಲಿ, ಅತ್ತಿಯ ಹಣ್ಣಾಗಲಿ ಅಥವಾ ಅರಳಿಯ ಹಣ್ಣಾಗಲಿ ಮರದ ತೊಟ್ಟಿನಿಂದ ಹೇಗೆ ಬಿಡಿಸಿಕೊಳ್ಳುತ್ತವೆಯೋ ಹಾಗೆ. ಇದಲ್ಲದೆ ಪ್ರಾಣವೂ ಅವನ ಜೊತೆಗೆ ನಿರ್ಗಮಿಸುತ್ತದೆ.''

ಈ ಸಂಸಾರಿಯು ಮುಂದಿನ ದೇಹವನ್ನು ಪ್ರವೇಶಿಸುವುದು ಹೇಗೆ? ಯಾಜ್ಞವಲ್ಕ್ಯನು ಒಂದು ಉದಾಹರಣೆಯನ್ನು ನೀಡುತ್ತಾನೆ. ''ಒಬ್ಬ ರಾಜನು ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಪ್ರಯಾಣ ಮಾಡುತ್ತಿದ್ದಾನೆ ಎಂದುಕೊಳ್ಳಿ. ಅವನ ಬರವನ್ನು ಎದುರುನೋಡುತ್ತ, ಗ್ರಾಮಸ್ಥರು, ಅಧಿಕಾರಿಗಳು, ಆಳುಕಾಳುಗಳು — ಎಲ್ಲರೂ ಗ್ರಾಮದ ಗಡಿಯಲ್ಲಿ ನಿಂತಿರುತ್ತಾರೆ. ಹಾಗೆಯೇ ದೇಹರಚನೆಯ ಅಂಗಗಳಾದ ಎಲ್ಲ ಪಂಚಭೂತಗಳು ಕೂಡ ಇಗೋ ಆತ್ಮವು ಬರುತ್ತಿದೆ, ಇಗೋ ಬರುತ್ತಿದೆ ಎಂದು ಮುಂದಿನ ದೇಹದಲ್ಲಿ ಕಾಯ್ದುಕೊಂಡಿರುತ್ತವೆ; ಆತ್ಮನ ಬರುವಿಕೆಗೆ ಸಿದ್ಧವಾಗಿರುತ್ತವೆ.

''ಇದೇ ಪ್ರಕ್ರಿಯೆ ಮರಣಕಾಲದಲ್ಲಿ ಕೂಡ ಆಗುತ್ತದೆ. ರಾಜನು ಆ ಗ್ರಾಮವನ್ನು ಬಿಟ್ಟು ಮುಂದಿನ ಗ್ರಾಮಕ್ಕೆ ಹೊರಟನೆಂದುಕೊಳ್ಳಿ. ಮತ್ತೆ ಗ್ರಾಮದ ಆಚೆಯ ದಡದಲ್ಲಿ ಅದೇ ಗ್ರಾಮಸ್ಥರು, ಅಧಿಕಾರಿಗಳು, ಆಳುಕಾಳುಗಳು ಮತ್ತೆ ಸೇರುತ್ತಾರೆ. ಅವನನ್ನು ಬೀಳ್ಕೊಡುತ್ತಾರೆ. ಇದೇ ರೀತಿ ಆತ್ಮವು ಮೇಲುಸಿರನ್ನು ಬಿಟ್ಟುಕೊಂಡು, ದೇಹವನ್ನು ಬಿಟ್ಟು ಹೊರಡಲು ಸನ್ನದ್ಧನಾಗುತ್ತಾನೆಯೋ, ಆಗ ಎಲ್ಲ ಇಂದ್ರಿಯಗಳೂ ಅವನ ಬಳಿ ಸಾರುತ್ತವೆ. ಹೀಗೆ ಲಿಂಗಶರೀರದೊಡನೆ ಕೂಡಿರುವ ಆತ್ಮನು ಯಾವ ಯಾವ ಕರ್ಮದಲ್ಲಿ ಆಸಕ್ತನಾಗಿರುತ್ತಾನೋ, ಆ ಕರ್ಮಗಳ ಫಲವನ್ನು ಪಡೆದುಕೊಳ್ಳಲು ಅದಕ್ಕೆ ಅನುಕೂಲವಾದ ದೇಹವನ್ನು ಪಡೆದುಕೊಳ್ಳುತ್ತಾನೆ. ಕರ್ಮಗಳ ಫಲವನ್ನು ಪಡೆದುಕೊಳ್ಳಲು ಉನ್ನತ ಲೋಕಗಳನ್ನು ಸೇರುತ್ತಾನೆ. ಅಲ್ಲಿ ಕರ್ಮಫಲವನ್ನು ಭೋಗಿಸಿ, ಮತ್ತೆ ಈ ಲೋಕಕ್ಕೇ ಹಿಂತಿರುಗುತ್ತಾನೆ. ಇದು ಕಾಮಿಯಾದ ಸಂಸಾರಿಯ ಗತಿ.''

ಇನ್ನುಮುಂದೆ ಮೋಕ್ಷವಿಚಾರವನ್ನು ಯಾಜ್ಞವಲ್ಕ್ಯನು ಜನಕನಿಗೆ ಬೋಧಿಸುತ್ತಾನೆ: ''ಮೇಲೆ ಹೇಳಿದ್ದು ಸಂಸಾರಿಯ ವಿಚಾರ. ಇನ್ನು ಅಕಾಮಿಯಾದ ಆತ್ಮಜ್ಞಾನಿಯ ಗತಿಯನ್ನು ಹೇಳುವೆನು, ಕೇಳು. ಅವನು ಅಕಾಮನು, ನಿಷ್ಕಾಮನು, ಆಪ್ತಕಾಮನು, ಆತ್ಮಕಾಮನು. ಅವನು ದೇಹತ್ಯಾಗ ಮಾಡಿದಾಗ, ಅವನ ಪ್ರಾಣಗಳೇನೂ ಉಡುಗಿಹೋಗುವುದಿಲ್ಲ. ಅಲ್ಲಿಯೇ ಲುಪ್ತವಾಗುತ್ತವೆ. ಬ್ರಹ್ಮರೂಪವೇ ಆಗಿರುವ ಅವನು ತನ್ನ ನಿಜರೂಪವಾದ ಬ್ರಹ್ಮದಲ್ಲಿಯೇ ಸೇರಿಹೋಗುತ್ತಾನೆ.''

ಸಂಸಾರಿಯ ಹಾಗೆ ಅವನು ಬೇರೆ ಯಾವ ಲೋಕವನ್ನೂ ಹೋಗಿ ಸೇರುವುದಿಲ್ಲ. ಅವನು ಇಲ್ಲಿಯೇ ಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ. ಯಾಜ್ಞವಲ್ಕ್ಯ ಹೇಳುತ್ತಾನೆ: ''ಯಾವಾಗ ಒಬ್ಬನ ಮನಸ್ಸಿನಲ್ಲಿ ಇರುವ ಎಲ್ಲ ಕಾಮನೆಗಳೂ ಬಿಟ್ಟುಹೋಗುವವೋ, ಆಗ ಮರಣಧರ್ಮವನ್ನು ಹೊಂದಿರುವ ಆ ಜೀವಿಯು ಅಮೃತವಾದ ತನ್ನ ನಿಜ ರೂಪವಾದ ಆತ್ಮನೊಡನೆ ತಾದಾತ್ಮ್ಯ ಹೊಂದುತ್ತಾನೆ. ಅವನು ಇಲ್ಲಿಯೇ, ಜೀವಿಸಿರುವಾಗಲೇ ಬ್ರಹ್ಮಭಾವವನ್ನು ಪಡೆದುಕೊಳ್ಳುತ್ತಾನೆ.''

ಇಲ್ಲಿ ಜೀವನ್ಮುಕ್ತನ ವಿವರಣೆಯನ್ನು ನಾವು ನೋಡುತ್ತೇವೆ. ಅವನು ಈ ಜಗತ್ತಿನಲ್ಲಿ ಹೇಗೆ ಬಾಳುತ್ತಾನೆ? ಒಂದು ಹಾವು ತನ್ನ ಹಳೆಯ ಚರ್ಮವನ್ನು ತ್ಯಜಿಸುತ್ತದೆ. ಆದರೂ ಆ ಚರ್ಮವು ಹಾವಿನಂತೆಯೇ ಕಾಣಿಸುತ್ತದೆ. ಅದರಂತೆ ಜೀವನ್ಮುಕ್ತನು ಶರೀರದಲ್ಲಿ ಇದ್ದುಕೊಂಡರೂ, ಶರೀರದಲ್ಲಿ ಸ್ವಲ್ಪವೂ ಅಭಿಮಾನವಿಲ್ಲದೆ ಇರುತ್ತಾನೆ. ಹೀಗಾಗಿ ಬಾಹ್ಯದಲ್ಲಿ ಶರೀರಿಯಾಗಿದ್ದರೂ ಕೂಡ, ಅಂತರಂಗದಲ್ಲಿ ಅಶರೀರಿಯಾಗಿ ಇರುತ್ತಾನೆ. ಅವನು ಅಮೃತನೂ, ಚೈತನ್ಯಸ್ವರೂಪನೂ ಬ್ರಹ್ಮರೂಪನೂ ಆಗಿರುತ್ತಾನೆ.

ಇಷ್ಟು ಉಪದೇಶ ಮಾಡಿ, ಯಾಜ್ಞವಲ್ಕ್ಯನು ಜನಕ ಮಹಾರಾಜನನ್ನು ಮೋಕ್ಷದ ಕಡೆಗೆ ಕರೆದುಕೊಂಡು ಹೋಗುತ್ತಾನೆ. ಜನಕನು ಸಾರ್ಥಕತೆಯನ್ನು ಪಡೆದುಕೊಳ್ಳುತ್ತಾನೆ. ಜನಕನು ಹೇಳುತ್ತಾನೆ, ''ಭಗವನ್, ನಿನಗೆ ನಾನು ಸಾವಿರ ಗೋವುಗಳನ್ನು ನೀಡುತ್ತೇನೆ.'' ಯಾಜ್ಞವಲ್ಕ್ಯನು ದಕ್ಷಿಣೆಯನ್ನು ಪಡೆದುಕೊಂಡು,